**ದಿ : 16-07-2026** ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : **1** ನೇ ಎದುರುದಾರ ಏಕಪಕ್ಷೀಯವಾಗಿ ತೀರ್ಮಾನಿಸಿದ್ದರಿಂದ ಸಾಕ್ಷೀ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲು : **2** ನೇ ಎದುರುದಾರರ ಪರ ವಕೀಲರಾದ ಶ್ರೀ ಕೆ. ಗುರುಪ್ರಸಾದ ಭಟ್ ರವರಿಂದ

ಅಪಘಾತದ ದಿನ ನಾನು ಕೋಣಿ ಕಡೆಯಿಂದ ಕುಂದಾಪುರದ ಕಡೆಗೆ ನನ್ನ ಮೋಟಾರ್ ಸೈಕಲ್ ಚಾಲನೆ ಮಾಡಿಕೊಂಡು ಬರುತ್ತಿದ್ದೆ. ನಾನು ವಡೇರಹೋಬಳಿಯ ಪೂಜಾಗ ಹೋಟೇಲ್ ಬಳಿ ಬರುತ್ತಿದ್ದಾಗ ಎದುರುನಿಂದ ಬಂದ ಒಂದು ಆಟೋ ಢಿಕ್ಕಿ ಪಡಿಸಿರುತ್ತದೆ. ಅಪಘಾತದಿಂದ ನನ್ನ ಬಲಕೈನ ಎರಡು ಬೆರಳುಗಳ ಮೂಳೆಗಳು ಮುರಿದಿದ್ದವು. ಅಪಘಾತ ರಾತ್ರಿ 09-30 ರ ಸಮಯದಲ್ಲಿ ಆಗಿದೆ. ಆಟೋರಿಕ್ಷಾದ ಮುಂದೆ ಬೇರೆ ವಾಹನಗಳು ಇರಲಿಲ್ಲ. ಆಟೋ ರಿಕ್ಷಾದ ಮುಖ್ಯ ದೀಪ ಆನ್ ಆಗಿತ್ತು. ಅಪಘಾತದ ಸ್ಥಳದಲ್ಲಿ ರಸ್ತೆ ನೇರವಾಗಿತ್ತು ಎಂದರೆ ಸರಿ. ನಾನು ಚಾಲನೆ ಮಾಡುತ್ತಿದ್ದ ಮೋಟಾರ್ ಸೈಕಲ್ ನ ಹಿಂದೆ ನನ್ನ ಸ್ನೇಹಿತನಾದ ನವೀನ್ ಕುಳಿತ್ತಿದ್ದ. ರಿಕ್ಷಾವನ್ನು ನಾನು ಸುಮಾರು 50 ಮೀಟರ್ ದೂರದಿಂದ ನೋಡಿರುತ್ತೇನೆ. ನಾನು ನೋಡಿದಾಗ ರಿಕ್ಷಾ ರಸ್ತೆಯ ಮೇಲೆ ನೇರವಾಗಿ ಬರುತ್ತಿತ್ತು. ನಾನು ನೋಡಿದಾಗ ರಿಕ್ಷಾ ತನ್ನ ಮಾರ್ಗದ ರಸ್ತೆಯ ಎಡಬದಿಯಲ್ಲಿದ್ದ ಎಂದರೆ ಸರಿ. ಅಪಘಾತದ ಸ್ಥಳದಲ್ಲಿ ಜನಜಂಗುಳಿ ಅಥವಾ ವಾಹನಗಳ ಜಂಗುಳಿ ಇರಲಿಲ್ಲ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ನಾನು ಮೋಟಾರ್ ಸೈಕಲ್‌ನ್ನು ಬಲಬದಿಗೆ ತಿರುಗಿಸಿದ್ದರಿಂದ ರಿಕ್ಷಾ ನನಗೆ ಢಿಕ್ಕಿ ಮಾಡುವುದನ್ನು ತಪ್ಪಿಸುವ ಸಲುವಾಗಿ ಅದನ್ನು ಅದರ ಚಾಲಕ ಬಲಭಾಗಕ್ಕೆ ತೆಗೆದುಕೊಂಡ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿದೆ ಮತ್ತು ರಿಕ್ಷಾ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ರಿಕ್ಷಾ ಹೊಸ ಆಟೋ ರಿಕ್ಷಾ ಮತ್ತು ಅದಕ್ಕೆ ಸಂಖ್ಯೆ ಫಲಕ ಹಾಕಿಲ್ಲ ಎಂದರೆ ಸರಿ. ಅಪಘಾತದ ಸಂದರ್ಭದಲ್ಲಿ ರಿಕ್ಷಾ ಚಾಲನೆ ಮಾಡುತ್ತಿದ್ದ ಚಾಲಕನ ಹೆಸರು ಸಂತೋಷ. ಆಟೋ ರಿಕ್ಷಾ ಚಾಲನೆ ಮಾಡಲು ಆತನಿಗೆ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ಪರಿಹಾರ ನೀಡಲು 2 ನೇ ಎದುರುದಾರ ವಿಮಾ ಸಂಸ್ಥೆ ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ನಾನು ಕುಂದಾಪುರದ ಚಿನ್ಮಯಿ ಆಸ್ಪತ್ರೆಯಲ್ಲಿ 4 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಒಳಸಾಧನ ಅಳವಡಿಸಿ ಈಗ ತೆಗೆದಿರುತ್ತಾರೆ. ಕೊನೆಯ ಬಾರಿಗೆ ಚಿಕಿತ್ಸೆ ಗಾಗಿ ಆಸ್ಪತ್ರೆಗೆ ನಾನು 15 ದಿನಗಳ ಹಿಂದೆ ಹೋಗಿದ್ದೆ.

ಅಪಘಾತದ ಪೂರ್ವದಲ್ಲಿ ನಾನು ಗಾರೆ ಕೂಲಿ ಮಾಡುತ್ತಿದ್ದೆ. ತಿಂಗಳಿಗೆ ರೂ.24,000/- ಹಣ ಸಂಪಾದನೆ ಮಾಡುತ್ತಿದ್ದೆ. ಆ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿ. ಅಪಘಾತವಾದ ನಂತರ ನಾನು ಒಂದು ವರ್ಷದವರೆಗೆ ಕೆಲಸಕ್ಕೆ ಹೋಗಿರುವುದಿಲ್ಲ. ಅಪಘಾತದಿಂದ ಆದ ಗಾಯಗಳಿಂದ ನನಗೆ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತದ ಪೂರ್ವದಲ್ಲಿ ನಾನು ಯಾವ ರೀತಿ ಆರೋಗ್ಯವಾಗಿದ್ದೆನೋ ಅದೇ ರೀತಿ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪತ್ರದಲ್ಲಿ ಹೇಳಿದಷ್ಟು ಹಣವನ್ನು ಚಿಕಿತ್ಸೆಗಾಗಿ, ಪ್ರಯಾಣಕ್ಕಾಗಿ, ಊಟೋಪಚಾರಕ್ಕಾಗಿ, ಸಹಾಯಕರಿಗೆ ಹಾಗೂ ಇನ್ನಿತರ ಸಾಂದರ್ಭಿಕ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ</u>: ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

ಸದಸ್ಯರು, ಹೆಚ್ಚುವರಿ ಮೋಟಾರು ವಾಹನ
ಅಪಘಾತ ಪರಿಹಾರ ಮಂಡಳಿ, ಕುಂದಾಪುರ